# ಕಲ್ಪತರು ನಾಡಿನ ಉದಯೋನ್ಮುಖ ಗಾಯಕ ಜಮೀರ್ ತಿಪಟೂರು

ಉದಯಕಾಲ ನ್ಯೂಸ್
ವಿಶೇಷ ವರದಿ: ಬಿ.ಟಿ.ಕುಮಾರ್

**ತಿಪಟೂರು:** ಕಲ್ಪತರು ನಾಡು ಎಂದೇ ಹೆಸರು ಪಡೆದಿರುವ ತಿಪಟೂರು ವಾಣಿಜ್ಯ ಕ್ಷೇತ್ರದ ಜೊತೆಗೆ ಕಲೆಯಲ್ಲಿ ರಾಜ್ಯಾದ್ಯಂತ ಗುರ್ತಿಸಿಕೊಂಡಿದೆ. ಹೆಸರಾಂತ ಹಾಸ್ಯಚಕ್ರವರ್ತಿ ನರಸಿಂಹರಾಜುರವರನ್ನು ನಾಡಿಗೆ ನೀಡಿದ ಕಲ್ಪತರು ನಾಡು ಗಾಯನ ಕ್ಷೇತ್ರಕ್ಕೆ ಜಮೀರ್ ತಿಪಟೂರು ರವರನ್ನು ನೀಡಿದೆ. ಈಗಾಗಲೇ ಸುಮಾರು 2 ಸಾವಿರಕ್ಕೂ ಹೆಚ್ಚಿನ ವಿವಿಧ ಬಗೆಯ ವೇದಿಕೆ ಕಾರ್ಯಕ್ರಮಗಳನ್ನು ನೀಡಿರುವ ಇವರು ಸುಮಾರು 14 ರಿಂದ 15 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಚಲನಚಿತ್ರ, ಭಾವಗೀತೆ, ಭಕ್ತಿಗೀತೆ, ಜಾನಪದಗೀತೆಗಳನ್ನು ಹಾಡಿ ಜನರನ್ನು ರಂಜಿಸಿದ್ದಾರೆ. ಈಗಾಗಲೇ ಅನೇಕ ಟ್ರೂಪ್‌ಗಳ ಜೊತೆ ತಮ್ಮ ಗಾಯನ ಕಲೆಯನ್ನು ಪ್ರದರ್ಶಿಸುತ್ತಿರುವ ಇವರು ನಾಡಿನ ಸುಪ್ರಸಿದ್ದ ಗಾಯಕರಾದ ರಾಜೇಶ್ ಕೃಷ್ಣನ್ ಹಾಗೂ ಅರ್ಜುನ್ ಜನ್ಯರವರ ಟ್ರೂಪ್‌ಗಳಲ್ಲಿಯೂ ಅನೇಕ ಪ್ರದರ್ಶನಗಳನ್ನು ನೀಡಿದ್ದಾರೆ.

ಪ್ರಸ್ತುತ ತಮ್ಮದೇ ಆದ ಶೃತಿ ಮೆಲೋಡೀಸ್ ತಂಡವನ್ನು ಕಟ್ಟಿಕೊಂಡು ನಾಡಿನಾದ್ಯಂತ ಜೊತೆಗೆ ತಮಿಳುನಾಡು, ಆಂಧ್ರದಲ್ಲಿಯೂ ಪ್ರದರ್ಶನವನ್ನು ನೀಡುತ್ತಿದ್ದಾರೆ. ಅನೇಕ ಕನ್ನಡಪರ ಸಂಘಟನೆಯೊಂದಿಗೆ ಗುರ್ತಿಸಿಕೊಂಡಿರುವ ಇವರು ತಮ್ಮ ಗಾಯನದಲ್ಲಿ ಕನ್ನಡ ಹಾಡುಗಳಿಗೆ ಮನ್ನಣೆ ನೀಡಿ ಕನ್ನಡಿಗರ ಮನಗೆದ್ದಿದ್ದಾರೆ ಹಾಗೂ ಇವರ ಮೆಲೋಡಿಯಸ್ ಹಾಡುಗಳ ಗಾಯನಕ್ಕೆ ಮನಸೋಲದವರಿಲ್ಲ ಹಾಗೂ ಭಕ್ತಿಗೀತೆಗಳಿಗೂ ತಮ್ಮದೇ ವಿಶಿಷ್ಟ ಶೈಲಿಯ ಹಾಡುಗಾರಿಕೆಯಿಂದ ನಾಡಿಗೆ ಮುಂದೆ ಸಿಗಬಹುದಾದ ಬಹುದೊಡ್ಡ ಗಾಯಕರಾಗಿ ಗುರ್ತಿಸಿಕೊಳ್ಳುತ್ತಿದ್ದಾರೆ.

ಈ ಹಿಂದೆ ಉದಯ ಟಿವಿಯಲ್ಲಿ ಪ್ರಸಾರವಾಗುತ್ತಿದ್ದ ಅಕ್ಷರಮಾಲೆ ಕಾರ್ಯಕ್ರಮದಲ್ಲಿ ಹಾಗೂ ಕುಹೂ ಕುಹೂ ಕಾರ್ಯಕ್ರಮದಲ್ಲಿ ಪ್ರದರ್ಶನವನ್ನು ನೀಡಿ ಗಾಯನ ಪ್ರಿಯರಿಗೆ ಹತ್ತಿರರಾಗಿದ್ದ ಇವರು ರಾಜೇಶ್ ಕೃಷ್ಣನ್ ಮತ್ತು ಅರ್ಜುನ್ ಜನ್ಯರವರಂತಹ ಪ್ರಸಿದ್ದ ಗಾಯಕ ಮತ್ತು ಪ್ರಸಿದ್ದ ಮ್ಯುಜಿಷಿಯನ್‌ರೊಂದಿಗೆ ಪ್ರದರ್ಶನ ನೀಡಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರ ಪ್ರದರ್ಶನಕ್ಕೆ ಸ್ಟೇಟ್ ಲೆವೆಲ್ ಮ್ಯೂಸಿಕ್ ಅಕಾಡೆಮಿಯಿಂದ ಉದಯೋನ್ಮುಖ ಗಾಯಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ, ಇದರ ಜೊತೆಗೆ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿರುವ ಇವರು ತಮ್ಮ ವಿಶಿಷ್ಟ ಕಂಠದಿಂದ ಜನಮನ ಗೆದ್ದಿದ್ದಾರೆ.

ಗಾಯನ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಯನ್ನು ಮಾಡಿರುವ ಇವರು ಇದರ ಜೊತೆಗೆ ಸಾಮಾಜಿಕ ಕ್ಷೇತ್ರದಲ್ಲಿಯೂ ತಮ್ಮದೇ ಸಹಾಯವನ್ನು ಮಾಡಿಕೊಂಡು ಸಂಕಷ್ಟದಲ್ಲಿರುವವರಿಗೆ ತಮ್ಮ ಕೈಲಾದ ಸಹಾಯವನ್ನು ಮಾಡುತ್ತಾ ಬರುತ್ತಿದ್ದಾರೆ. ಕೆಜಿಎನ್ ವೆಲ್‌ಫೇರ್ ಟ್ರಸ್ಟ್ ಮೂಲಕ ಸಾಮಾಜಿಕ ಕಳಕಳಿಯೊಂಗೆ ಸುಮಾರು 10 ಸರ್ಕಾರಿ ಶಾಲೆಗಳ ಮಕ್ಕಳಿಗೆ ನೋಟ ಬುಕ್ ಮತ್ತು ಪರಿಕರಗಳನ್ನು ಒದಗಿಸಿದ್ದಾರೆ. ವೃದ್ದರಿಗೆ ವೈದ್ಯಕೀಯ ಖರ್ಚು ವೆಚ್ಚದ ಜೊತೆಗೆ ಔಷಧಿಗಾಗಿ ಹಣಕಾಸಿನ ಸಹಾಯವನ್ನು ಮಾಡಿಕೊಡು ಬರುತ್ತಿದ್ದಾರೆ. ಕೋವಿಡ್ ಮಹಾಮಾರಿಯ ಸಂದರ್ಭದಲ್ಲಿ ಅವಶ್ಯಕತೆ ಇವರು ಕುಟುಂಬಗಳಿಗೆ ರೇಷನ್ ಕಿಟ್ ಹಾಗೂ ಆಗತ್ಯ ಪರಿಕರಗಳನ್ನು ಒದಗಿಸಿ ಸಾಮಾಜಿಕ ಬದ್ದತೆಯನ್ನು ಪ್ರದರ್ಶಿಸಿದ್ದಾರೆ. ಟ್ರಸ್ಟ್‌ವತಿಯಿಂದ ನಿವೃತ್ತ ಯೋಧರಿಗೆ ಸನ್ಮಾನ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವಂತಹ ಅನೇಕ ಸಾಧಕರನ್ನು ಗುರ್ತಿಸಿ ಸನ್ಮಾನಗಳನ್ನು ಮಾಡಿ ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎನ್ನುವ ನಾಣ್ಣುಡಿಯಂತೆ ಸಮಾಜದಿಂದ ಬಂದಿರುವುದನ್ನು ಸಾಮಾಜಿಕ ಕಾರ್ಯಗಳಿಗೆ ಬಳಸಿಕೊಂಡು ಇತರರಿಗೆ ಮಾದರಿಯಾಗಿ ಅದರಲ್ಲಿಯೂ ಯುವಕರಿಗೆ ಮಾದರಿಯಾಗಿದ್ದಾರೆ, ಜೊತೆಗೆ ಯುವಕರಿಗೆ ಒಂದು ಉದಾಹರಣೆಯಾಗಿ ನಿಂತಿರುವುದು ನಿಜಕ್ಕೂ ತಾಲ್ಲೂಕಿಗೆ ಹೆಮ್ಮಯ ವಿಷಯ.

# ದೇಶಕ್ಕೆ ಮೋದಿ, ರಾಜ್ಯದ ರೈತರಿಗಾಗಿ ಕುಮಾರಸ್ವಾಮಿ

ಉದಯಕಾಲ ನ್ಯೂಸ್

**ನಾಗಮಂಗಲ:** ದೇಶ ಇಂದು ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿರುವುದರ ಜೊತೆಗೆ ಭದ್ರತೆಯ ದೃಷ್ಟಿಯಿಂದ ದೇಶಕ್ಕೆ ಹೇಗೆ ನರೇಂದ್ರ ಮೋದಿ ಅನಿವಾರ್ಯವೋ ಹಾಗೆ ರಾಜ್ಯದ ರೈತರ ಹಿತದೃಷ್ಟಿಯಿಂದ ಕುಮಾರಸ್ವಾಮಿ ರಾಜ್ಯಕ್ಕೆ ಅವರ ಅವಶ್ಯಕತೆಯಿದೆಯೆಂದು ಮೈಸೂರು ಕೊಡಗು ಸಂಸದ ಪ್ರತಾಪ ಸಿಂಹ ಅಭಿಪ್ರಾಯ ವ್ಯಕ್ತ ಪಡಿಸಿದರು. ಅವರು ಟಿ ಬಿ ಬಡಾವಣೆಯ ಬಡಗೊಡಮ್ಮ ದೇವಸ್ಥಾನದ ಮುಂಭಾಗದಲ್ಲಿ ಏರ್ಪಡಿಸಿದ್ದ ಬಿಜೆಪಿ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ನರೇಂದ್ರ ಮೋದಿಗೆ ವೀಸಾ ಕೊಡುವುದಿಲ್ಲವೆಂದವರು ಇಂದು ಅವರ ಭೇಟಿಗೆ ಹಾತೊರೆಯುತ್ತಿದ್ದಾರೆ. ಭಾರತ ಇಂದು ಅಭಿವೃದ್ಧಿಯಲ್ಲಿ ಮುನ್ನಡೆಯುತ್ತಿದೆ. ಇಂದು ರಾಜ್ಯದಲ್ಲಿ ಜಾತಿ ಜಾತಿಗಳ ನಡುವೆ ವೈಷಮ್ಯದ ವಿಷ ಬೀಜ ಬಿತ್ತುವ ಕೆಲಸ ಮಾಡುತ್ತಿರುವ ಕಾಂಗ್ರೆಸ್ ಅದರ ಆಧಾರದ ಮೇಲೆ ಚುನಾವಣೆ ಎದುರಿಸುತ್ತಿದೆ. ಅದನ್ನು ಮೆಟ್ಟಿ ನಿಲ್ಲಲು ನಾವು ನೀವು ಎಲ್ಲರೂ ಒಂದೇ ಮನಸ್ಸಿನಿಂದ ಒಗ್ಗೂಡಿ ಚುನಾವಣೆ ಎದುರಿಸಿದರೇ ಗೆಲುವು ನಿಶ್ಚಿತ. ಪ್ರೀತಿ ವಿಶ್ವಾಸದಿಂದ ನಾವು ಮತದಾರರನ್ನು ಗೆಲ್ಲಬೇಕು. ದೇಶದ ಭದ್ರತೆಯ ದೃಷ್ಟಿಯಲ್ಲಿ ಈ ಚುನಾವಣೆ ಮಹತ್ತರ ಪಾತ್ರ ವಹಿಸುತ್ತಿದ್ದು ಎನ್‌ಡಿಎ ಯನ್ನು ಅಧಿಕಾರಕ್ಕೆ ತರಬೇಕು ಎನ್ನುವ ಸಂಕಲ್ಪದಲ್ಲಿ ನಾವು ಕೆಲಸ ಮಾಡಬೇಕಾಗಿದೆಯೆಂದು ಹೇಳುತ್ತಾ ಯಾವಾಗ ಕಾಂಗ್ರೆಸ್ ಅಧಿಕಾರದಲ್ಲಿರುತ್ತದೋ ಆಗ ರಾಜ್ಯದಲ್ಲಿ ಬರಗಾಲ ಖಂಡಿತವೆಂದು ಸಾಬೀತಾಗಿದೆ. ಕುಮಾರಸ್ವಾಮಿ, ಮತ್ತು ಯಡಿಯೂರಪ್ಪನವರ ಕಾಲದಲ್ಲಿ ಮಳೆಯಾಗಿ ರೈತರು ಸುಖವಾಗಿದ್ದರು. ಆದರೇ ಈಗ ಯಾವ ಕೆರೆಯಲ್ಲೂ ಯಾವ ಹಳ್ಳದಲ್ಲೂ ನೀರಿಲ್ಲದೇ ಕುಡಿಯುವ ನೀರಿಗಾಗಿ ಪರಿತಪಿಸುವಂತಾಗಿದೆ. ಬಿಜೆಪಿ ಜೇಡಿಎಸ್ ಕಳೆದ ಚುನಾವಣೆಯಲ್ಲಿ ಒಂದಾಗಿದ್ದರೇ ಇಂದು ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿರಲಿಲ್ಲ. ರಾಜ್ಯ ಸರ್ಕಾರ ಮುಂಬರುವ ಚುನಾವಣಾ ಫಲಿತಾಂಶದ ಮೇಲೆ ನಿಂತಿದ್ದು ಡಿಸೆಂಬರ್ ತಿಂಗಳೊಳಗೆ ಕಾಂಗ್ರೆಸ್ ಸರ್ಕಾರ ಪತನವಾಗುವುದು ನಿಶ್ಚಿತವೆಂದು ಪ್ರತಾಪ ಸಿಂಹ ಭವಿಷ್ಯ ನುಡಿದರು.

ಕಾರ್ಯಕ್ರಮದಲ್ಲಿ ಮಳ್ಳವಳ್ಳಿಯ ಮಾಜಿ ಶಾಸಕ ಅನ್ನದಾನಿ, ಮಾಜಿ ಸಚಿವ ಡಾ ನಾರಾಯಣ ಗೌಡ, ಕೆಆರ್ ಪೇಟೆ ಶಾಸಕ ಮಂಜು, ಮಾಜಿ ವಿಧಾನ ಪರಿಷತ್ ಸದಸ್ಯ ಶ್ರೀಕಂಠೇಗೌಡ, ಚೇತನ್ ಗೌಡ,ನರಸಿಂಹಮೂರ್ತಿ ಮುಂತಾದವರಿದ್ದರು.

**CHANGE OF NAME**

We, Mr. Nirmal Kumar Goutham Chand & Mrs. Shanthi. D, both residing at # 2332, Vikasa High School Road, Ramamurthy Nagar, Bangalore North, Dooravaninagar, Bangalore, Karnataka-560016 Have Changed our Minor Son's Name born on October 02, 2007 From Vishal To Vishal Jain for future purposes Vide affidavit dated 30-03-2024 sworn before notary Vatsala, Bangalore

**CHANGE OF NAME**

I SIDHARTH V P S/o Prasanth V K, R/O #195, Gravity Nakshatra, Supra Enclave, Varadapura, Opp. Satya Sai Convention Hall, Malur Road, Hosakote, Bangalore Rural, Karnataka-562114, have changed my name and shall hereafter be known as SIDHARTH VADAKEKKARA PRASANTH

**CHANGE OF NAME**

I RAVIKUMAR POOJARA , S/o of Suryakant Poojara aged about 36 years residing at 29035, Sobha Dream Acres, Varthur Balagere, Balagere, Bangalore-560087 changed my name to RAVIKUMAR SURYAKANT POOJARA vide affidavit dated 30-03-2024 sworn before Notary Ravikumar V , Bangalore

**CHANGE OF NAME**

It is for general information that I, Veena Solomon D/o Late Rajendra Krishnappa, Ex-wife of Solomon Sadhu, residing at 204 Alpine Apartment, C Block, Bellary Road, Ganga nagar, Bangalore North, R.T. Nagar, Bengaluru, Karnataka-560032, do hereby solemnly affirm and declare that I got a divorce from my husband Vide Court Decree M.C.No. 3162/2013 Dated.02/04/2014. Further I have changed my name Veena Solomon and shall hereafter be known as Veena Rajendra, which may be amended accordingly.

# ಬಿಜೆಪಿಗೆ ಸೇರ್ಪಡೆಗೊಂಡ ಭ್ರಷ್ಟಾಚಾರಿಗಳಿಗೆ ಕ್ಲೀನ್ ಚಿಟ್: ಕೆ ಎನ್ ರಾಜಣ್ಣ

ಮಧುಗಿರಿ: ದೇಶದಲ್ಲಿ ಭ್ರಷ್ಟರ ವಿರುದ್ಧ ಐಟಿ, ಇಡಿ, ಸಿಐಡಿ ಅಧಿಕಾರಿಗಳನ್ನು ಬಿಟ್ಟು ನಂತರ ಅವರನ್ನೇ ತಮ್ಮ ಪಕ್ಷಕ್ಕೆ ಸೇರಿಸಿ ಕೊಂಡು ಭ್ರಷ್ಟಾಚಾರ ವನ್ನು ವಾಷಿಂಗ್ ಮಿಷನ್ ಮುಖಾಂತರ ತೊಳೆದು ಕ್ಲೀನ್ ಚಿಟ್‌ನ್ನು ಬಿಜೆಪಿ ಯವರು ನೀಡುತ್ತಿದ್ದಾರೆಂದು ಸಹಕಾರ ಸಚಿವ ಕೆ ಎನ್ ರಾಜಣ್ಣ ಲೇವಡಿ ಮಾಡಿದರು.

ಪಟ್ಟಣದ ಎಪಿಎಂಸಿ ಹಿಂಭಾದಲ್ಲಿರುವ ತಮ್ಮ ಸ್ವ ಗೃಹದಲ್ಲಿ ಆಯೋಜಿಸಲಾಗಿದ್ದ ಲೋಕಸಭಾ ಚುನಾವಣೆಯ ಕಾಂಗ್ರಸ್ ಪಕ್ಷದ ಅಭ್ಯರ್ಥಿ ಎಸ್ ಪಿ ಮುದ್ದಹನುಮೇಗೌಡ ರವರ ಚುನಾವಣೆಯ ಪೂರ್ವ ಸಿದ್ದತೆಯ ಮುಖಂಡರು ಮತ್ತು ಕರವ ಯಕರ ವತ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೆಲ ಪ್ರಮುಖ ಸಂಸ್ಥೆಗಳು ಇಂದೂ ಕೇಂದ್ರದ ಬಿಜೆಪಿ ಸರ್ಕಾರದ ಕೈ ಗೊಂಬೆಗಳಾಗಿವೆ. ಮೋದಿ ಹೇಳಿದಂತೆ ಅವುಗಳು ಮಾಡುತ್ತಿವೆ. ಇವುಗಳಿಂದ ಭ್ರಷ್ಟಾಚಾರ ನಿರ್ಮೂಲನೆ ಆಗುತ್ತಿಲ್ಲ.

ರೈತರು ನೆಡೆಸುತ್ತಿರುವ ದೆಹಲಿ ಚಲೋ

ಪ್ರತಿಭಟನೆಯಲ್ಲಿ 300 ಜನ ರೈತರು ಮರಣ ಹೊಂದಿದ್ದಾರೆ. ಅವರ ಬಗ್ಗೆ ಕನಿಕರವಿಲ್ಲ . ರೈತರ ಸಾಲ ಮನ್ನಾ ಮಾಡಿ ಎಂದರೆ ದೊಡ್ಡ ದೊಡ್ಡ ಕಾರ್ಪೊರೇಟ್ ಸಂಸ್ಥೆ ಯವರ ಸಾಲ ಮನ್ನಾ ಮಾಡಿದ್ದಾರೆ. 12,900 ಕೋಟಿ ರೂ ಗಳ ಬಾಂಡ್ ಭ್ರಷ್ಟಾಚಾರದಲ್ಲಿ ಬಿಜೆಪಿ ತೊಡಗಿದೆ.

ಇನ್ನೂ ಲೋಕಸಭಾ ಚುನಾವಣೆಯಲ್ಲಿ ತೊಡಗಿರುವ ಮಾಜಿ ಪ್ರಧಾನಿಗಳು ಎಸ್ ಟಿ ಸಮುದಾಯದವರು ರಾಜಣ್ಣನ ಮಾತು ಕೇಳ ಬೇಡಿ ಎಂದು ಹೇಳಿದ್ದಾರೆ. ನನ್ನ ಮಾತು ಸಮುದಾಯದವರು ಕೇಳುತ್ತಾರೆಯೇ ನನ್ನ ವಿರುದ್ಧ ನಮ್ಮ ಸಮುದಾಯದವರನ್ನೆ ವಿಧಾನ ಸಭೆಯಲ್ಲಿ ಸ್ಪರ್ಧಿ ಸುವಂತೆ ಮಾಡಿದರು ಕೆಲವರು. ನಾನು ಎಲ್ಲಾ ಸಮುದಾಯಗಳಿಂದ ಆಯ್ಕೆಯಾಗಿ ಸಚಿವ ನಾಗಿದ್ದೇನೆ.

ಹಾಸನದಲ್ಲಿ ಅವರದ್ದೇ ದೇಶ ಅವರದ್ದೇ ಸಂವಿಧಾನ ಅವರದ್ದೇ ಗಡಿ ಗುರುತಿಸಿ ಕೊಂಡಿರುವವರು ಯಾರು? ಕುಟುಂಬ ರಾಜ ಕಾರಣ ಮಾಡುತ್ತೀರುವವರು ಯಾರು? ನಾನು ಮುಂದಿನ ಜನ್ಮದಲ್ಲಿ ಮುಸ್ಲಿಂನಾಗಿ ಜನಿಸ ಬೇಕೆಂದ್ದೀನೆ, ಮೋದಿ ಪ್ರಧಾನಿ ಯಾದರೆ ದೇಶವೇ ಸುಟ್ಟು ಹೋಗುತ್ತದೆ ಎಂದು ಹೇಳಿದವರು ಇಂದು ಜನರಲ್ಲಿ ದ್ವೇಷ ಭಾವನೆ ಪ್ರಚೋದಿಸುವವರ ಜತೆಯಲ್ಲಿ ರಾಜಕೀಯ ಅಧಿಕಾರಕ್ಕಾಗಿ ಹಿಂದೆ ಹೋಗಿರುವವರು ಯಾರು ಎಂದು ಪ್ರಶ್ನಿಸಿದರು.

ಕೋಲಾರದಿಂದ ನನ್ನ ಮಗನನ್ನು ಸ್ಪರ್ಧಿಸುವಂತೆ ಅಲ್ಲಿನ ಜನರು ಹೇಳುತ್ತಿದ್ದಾರಂತೆ ಆ ಕ್ಷೇತ್ರವು ಯಾವ ಸಮುದಾಯಕ್ಕೆ ಮೀಸಲಾಗಿದೆ ಎಂಬುದು ತಿಳಿದಿಲ್ಲವೇ. ಅವರು ನಮ್ಮ ರಾಜ್ಯದ ಹೆಮ್ಮೆಯ ಪ್ರಧಾನಿಗಳಾಗಿದ್ದವರು. ಮುತ್ಸದಿ ರಾಜಕಾರಣಿ ಯಾಗಿರುವ ದೇವಗೌಡರ ಬಾಯಿಯಲ್ಲಿ ಸುಳ್ಳು ಭರವಸೆಗಳು ಬರ ಬಾರದು ಅದೂ ಅವರಿಗೆ ಶೋಭೆಯಲ್ಲ.

ಜಿಲ್ಲೆಯ ಎಂಟು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ನೀಡುವ ಮತಗಳಿಗಿಂತ ನಮ್ಮ ಕ್ಷೇತ್ರದಲ್ಲಿ ಅತಿ ಹೆಚ್ಚು ಮತಗಳು ಸರಳ ಸಜ್ಜನಿಕೆಯ ವ್ಯಕ್ತಿ ಎಸ್ ಪಿ ಮುದ್ದಹನುಮೇಗೌಡರಿಗೆ ನೀಡಿ. ಇದು ಪ್ರಮುಖ ಚುನಾವಣೆ ಯಾಗಿದೆ ಶಾಸಕರು, ಸಚಿವರು, ಕಾಂಗ್ರೆಸ್ ಪಕ್ಷದ ಗೌರವ ಉಳಿಸುವ ಶಕ್ತಿ ನಿಮ್ಮ ಕೈಯಲ್ಲಿದೆ.

ಲೋಕಸಭಾ ಅಭ್ಯರ್ಥಿ ಎಸ್ ಪಿ ಮುದ್ದಹನುಮೇಗೌಡ ಮಾತನಾಡಿ, ನಾನು ಈ ಹಿಂದೆ ದೇಶ, ರಾಜ್ಯ ನಮ್ಮ ಜಿಲ್ಲೆಯ ಹಾಗೂ ಮೇಕೆದಾಟು, ಮಹದಾಯಿ ನದಿ ನೀರು, ತುಮಕೂರು-ರಾಯದುರ್ಗಾ ರೈಲ್ವೇ ಕಾಮಗಾರಿ, ಗುಲ್ಬರ್ಗಾ ಯಾದಗಿರಿ ಕ್ಷೇತ್ರ, ತೆಂಗು ಮತ್ತು ಅಡಿಕೆ ಬೆಳೆಗಳ, ತಾಲೂಕಿನ ಕರಡಿ ದಾಳಿಯ ವಿಚಾರವಾಗಿ ಸಂಸತ್ ನಲ್ಲಿ ಚರ್ಚಿಸಿದ್ದೇನೆ.

ವಿಧಾನ ಪರಿಷತ್ ಸದಸ್ಯ ರಾಜೇಂದ್ರ ರಾಜಣ್ಣ, ಮಾಜಿ ಜಿ.ಪಂ ಅಧ್ಯಕ್ಷರಾದ ಶಾಂತಲಾ ರಾಜಣ್ಣ, ಜಿ.ಜೆ.ರಾಜಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ್ ಗೌಡ, ಮುಖಂಡರಾದ ಶಶಿಹುಲಿಕುಂಟೆ ಮಠ್, ಎಂ ಎಸ್ ಮಲ್ಲಿಕಾರ್ಜುನಯ್ಯ, ಆದಿನಾರಾಯಣ ರೆಡ್ಡಿ, ಗೋಪಾಲಯ್ಯ, ತುಂಗೋಟಿರಾಮಣ್ಣ, ಬಿ.ನಾಗೇಶ್ ಬಾಬು, ಚೌಡಪ್ಪ, ಪಿ.ಸಿ ಕೃಷ್ಣಾರೆಡ್ಡಿ, ಪ್ರಮೀಳಮ್ಮ, ಇಂದಿರಾ ದೇನಾ ನಾಯ್ಕ, ಸುರ್ವಣಮ್ಮ, ಪಿಟಿ ಗೋವಿಂದಯ್ಯ, ಡಿ.ಜಿ.ಶಂಕರನಾರಾಯಣ ಶೆಟ್ಟಿ ಕಲ್ಲಹಳ್ಳಿ ದೇವರಾಜು, ವಿಜಯ್ ಕುಮಾರ್ ಜೈನ್ ಹಾಗೂ ಮತ್ತಿತರರು ಇದ್ದರು.

# ವಿದ್ಯಾರ್ಥಿಗಳಲ್ಲಿ ಸಂಸ್ಕಾರ ಬೆಳೆಸಲು ಸಾಂಸ್ಕೃತಿಕ ಕಾರ್ಯಕ್ರಮ ಸಹಕಾರಿ: ಪ್ರೊ.ಹೇಮಲತಾ

**ಕೆ.ಆರ್.ಪೇಟೆ:** ವಿದ್ಯಾರ್ಥಿಗಳಿಗೆ ಸಂಸ್ಕಾರ ಸಿಗಲು ಸಾಂಸ್ಕೃತಿಕ ವಾತಾವರಣದಿಂದ ಮಾತ್ರ ಸಾಧ್ಯ.. ವಿದ್ಯಾಭ್ಯಾಸದ ಅವಧಿಯಲ್ಲಿ ಅವರ ಆಸಕ್ತಿಯನ್ನು ಗಮನಿಸಿ ಅವರ ಚಟುವಟಿಕೆಗಳಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿದರೆ ಭವಿಷ್ಯದಲ್ಲಿ ಉತ್ತಮ ಯಶಸ್ಸನ್ನು ಗಳಿಸುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳಿಗೆ ತಮ್ಮಲ್ಲಿನ ಪ್ರತಿಭೆಯನ್ನು ಹೊರಚೆಲ್ಲಲು ಸಾಂಸ್ಕೃತಿಕ ಚಟುವಟಿಕೆಗಳ ವೇದಿಕೆಯನ್ನು ನಿರ್ಮಿಸಿಕೊಡಬೇಕು ಎಂದು ಕೆ.ಆರ್.ಪೇಟೆ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲ್ ಡಾ.ಹೇಮಲತಾ ಹೇಳಿದರು.

ಅವರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು(ಪದವಿ ಮಹಾವಿದ್ಯಾಲಯ) 2023-24ನೇ ಸಾಲಿನ ಪ್ರತಿಭೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪದವಿ ಹಂತದಲ್ಲಿ ಮಕ್ಕಳ ಮನಸ್ಸು ವಿಕಾಸದ ಹಂತವನ್ನು ತಲುಪಿರುತ್ತದೆ. ಇಂತಹ ವೇದಿಕೆಗಳ ಮೂಲಕ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಅವರ ಮುಂದಿನ ಜೀವನಕ್ಕೆ ರಹದಾರಿ ಸಿಕ್ಕಂತಾಗುತ್ತದೆ. ಮಕ್ಕಳನ್ನು ನಾಲ್ಕು ಗೋಡೆಗಳ ಮಧ್ಯದ ಪಾಠಕ್ಕೆ ಮಾತ್ರ ಸೀಮಿತಗೊಳಿಸಬಾರದು. ಬೌದ್ಧಿಕ ವಿಕಾಸಕ್ಕೂ ಅವಕಾಶ ನೀಡಬೇಕು. ಇಂತಹ ಒಳ್ಳೆಯ ಕೆಲಸವನ್ನು ನಮ್ಮ ಕಾಲೇಜಿನ ಸಾಂಸ್ಕೃತಿಕ ವೇದಿಕೆ ಮಾಡುತ್ತಿದ್ದು ವಿದ್ಯಾರ್ಥಿ ಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಇದರ ಜೊತೆ ಜೊತೆಗೆ ಪರೀಕ್ಷೆಗೆ ಸಿದ್ದರಾಗಿ ಉತ್ತಮ ಫಲಿತಾಂಶವನ್ನು ಪಡೆಯಬೇಕು ಎಂದು ಹೇಮಲತಾ ಮನವಿ ಮಾಡಿದರು.

ಕಾಲೇಜಿನ ಪ್ರಾಧ್ಯಾಪಕಿ ಡಾ.ಸವಿತಾ ಮಾತನಾಡಿ, ಸಾಂಸ್ಕೃತಿಕ ಮನಸ್ಸನ್ನು ಹೊಂದಿರುವ ವ್ಯಕ್ತಿ ಸಮಾಜದ ಉನ್ನತಿಯ ಬಗೆಗೆ ಸದಾ ಆಲೋಚಿಸುತ್ತಾನೆ. ದೇಶದ ಸಂಸ್ಕೃತಿಯ ಉಳಿವಿಗೆ ಯುವ ಜನರು ಶ್ರಮಿಸಬೇಕು ಎಂದು ಎಲ್ಲರೂ ಆಶಿಸುತ್ತಾರೆ. ಕೇವಲ ಆಶಿಸುವುದರಿಂದ ಸಂಸ್ಕೃತಿ ಉಳಿಯುವುದಿಲ್ಲ, ಸಾಂಸ್ಕೃತಿಕ ವೇದಿಕೆಗಳ ಮೂಲಕ ಯುವ ಜನರ ಮನಸ್ಸನ್ನು ಬೆಸೆಯಬೇಕು. ಹೊಸತು ಮತ್ತು ಹಳತಿನ ಸಮ್ಮಿಲನವಾದಾಗ ಮಾತ್ರ ಉತ್ತಮ ಸಂಸ್ಕೃತಿ ರೂಪುಗೊಳ್ಳುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಆಹಾರದಿಂದ ಹಿಡಿದು ಉಡುಗೆ ತೊಡುಗೆಯವರೆಗೆ ಹಳತನದ ಜೊತೆಗೆ ಹೊಸತನ್ನು ವಿಲೀನಗೊಳಿಸಬೇಕು ಎಂದು ಸವಿತಾ ಕರೆ ನೀಡಿದರು.

**ವಾಸ್ತು ಹೌಸಿಂಗ್ ಫೈನಾನ್ಸ್ ಕಾರ್ಪೊರೇಷನ್ ಲಿ.**

VASTU HOUSING FINANCE

ನೋ. ಕಚೇರಿ: ಯುನಿಟ್ 203 ಮತ್ತು 204, 2ನೇ ಮಹಡಿ, "ಎ" ವಿಂಗ್ ಸನ್‌ಧಾರತ್ ಎಸ್ಟೇಟ್, ಝಕಾರಿಯ ಬ